ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಂಪುಟ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE: 5/2/2020

# ಶನಿವಾರ ರಜೆ ಬದಲು ಸಿಎಲ್

## ಸಂಪುಟ ಸಭೆ ನಿರ್ಧಾರ | ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ₹ 220 ಕೋಟಿ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

4ನೇ ಶನಿವಾರದ ರಜೆ ಅನ್ವಯ ಆಗದೆ ಇರುವ ಸರ್ಕಾರಿ ನೌಕರರಿಗೆ 15 ಸಿಎಲ್ ನೀಡಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಮಂಗಳವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ.



ಸಭೆಯ ನಂತರ ಸುದ್ದಿಗಾರರಿಗೆ ವಿವರ ನೀಡಿದ ಸಚಿವ ಜೆ.ಸಿ. ಮಾಧುಸ್ವಾಮಿ, ನಾಲ್ಕನೇ ಶನಿವಾರ ಸರ್ಕಾರಿ ರಜೆ ಘೋಷಿಸಿದ್ದ ಹಿನ್ನೆಲೆಯಲ್ಲಿ ಸಿಎಲ್‌ಗಳ ಸಂಖ್ಯೆಯನ್ನು 10ಕ್ಕೆ ಇಳಿಸಲಾಗಿತ್ತು. ರಜೆ ಅನ್ವಯವಾಗದ ಇಲಾಖೆಗಳಲ್ಲಿ ಸಿಎಲ್ ಹೆಚ್ಚಳಕ್ಕೆ ಬೇಡಿಕೆ ಇತ್ತು ಎಂದರು. ಕಾರ್ಮಿಕ ಇಲಾಖೆ ಕಾರ್ಮಿಕ ಸೇವೆಗಳ (ವೃಂದ ಮತ್ತು ನೇಮಕಾತಿ)ನಿಯಮಗಳು-2019ಕ್ಕೆ ಅನುಮೋದನೆ ನೀಡಲಾಗಿದೆ. ವಸತಿ ರಹಿತರಿಗೆ ವಸತಿ ಕಲ್ಪಿಸಲು ಚಿಕ್ಕಬಳ್ಳಾಪುರ ಜಿಲ್ಲೆ ಕಸಬಾ ಹೋಬಳಿ ಮರಳುಕುಂಟೆಯಲ್ಲಿ 61 ಎಕರೆ, ಅವುಲಹಳ್ಳಿಯಲ್ಲಿ 10 ಎಕರೆ ಸೇರಿ 71 ಎಕರೆಗೆ ಭೂ ಕಂದಾಯ ಕಾಯ್ದೆಯಿಂದ ವಿನಾಯಿತಿ ನೀಡಲಾಗಿದೆ ಎಂದು ತಿಳಿಸಿದರು.

**ಶಿವಮೊಗ್ಗಕ್ಕೆ 220 ಕೋಟಿ:** ಮುಖ್ಯಮಂತ್ರಿಗಳ ತವರು ಜಿಲ್ಲೆ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ 220 ಕೋಟಿ ರೂ. ಅನುದಾನ ಮಂಜೂರಿಗೆ ಸಂಪುಟ ಒಪ್ಪಿಗೆ ನೀಡಿದೆ. ವಿಮಾನ ನಿಲ್ದಾಣ ಕಾಮಗಾರಿ ಬಗ್ಗೆ ಮೇ.ರೈಟ್ಸ್ ಸಂಸ್ಥೆ ಸಲ್ಲಿಸಿರುವ ಕಾನ್ಸೆಪ್ಟ್ ನೋಟ್ಸ್ ಹಿನ್ನೆಲೆಯಲ್ಲಿ ಅನುಮೋದನೆ ನೀಡಲಾಗಿದೆ.

### ಪ್ರಮುಖ ತೀರ್ಮಾನಗಳು

- ಚುನಾವಣಾ ಆಯೋಗ ಮನವಿ ನಿರ್ವಾಚನ ನಿಲಯ ಕಚೇರಿ ಪಕ್ಕದಲ್ಲಿ ಹೆಚ್ಚುವರಿ ಕಚೇರಿ ನಿರ್ಮಾಣಕ್ಕೆ 13.50 ಕೋಟಿ ರೂ. ಮಂಜೂರು.
- ಶಿಕ್ಷಣ ಇಲಾಖೆಯ ನಲಿ-ಕಲಿ ಯೋಜನೆಗೆ ಕಲಿಕಾ ಸಾಮಾಗ್ರಿಗಳನ್ನು ಖರೀದಿ ಮಾಡಲು 27 ಕೋಟಿ ರೂ. ಅನುದಾನ.
- ವಿವಿಧ ಜಿಲ್ಲೆಗಳಲ್ಲಿ ತುರ್ತು ಆರೋಗ್ಯ ಸೇವೆಗಾಗಿ 32.04 ಕೋಟಿ ರೂ. ವೆಚ್ಚದಲ್ಲಿ 120 ಹೊಸ ಆಂಬುಲೆನ್ಸ್ ಖರೀದಿಗೆ ಒಪ್ಪಿಗೆ.
- ಬೆಂಗಳೂರು ಬೋರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ ಆವರಣದಲ್ಲಿ ಮತ್ತು ಎಚ್‌ಎಸ್‌ಐಎಸ್ ಘೋಷ್ ಆಸ್ಪತ್ರೆ ಆವರಣದಲ್ಲಿ ಬಾಲಕಿಯರ ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕೆ 263.10 ಕೋಟಿ ರೂ. ಮೀಸಲು.
- ಬೆಂಗಳೂರಿನ ಕೇಂದ್ರ ಕಾರಾಗೃಹ 2ನೇ ಹಂತದ ಅಭಿವೃದ್ಧಿ ಕಾಮಗಾರಿಗಳಿಗೆ 1056 ಕೋಟಿ ರೂ., ಬೀದರ್‌ನಲ್ಲಿ ವಿಶಿಷ್ಟ ರೀತಿಯ ಜೈಲು ನಿರ್ಮಾಣ ಕಾಮಗಾರಿಗೆ 99.95 ಕೋಟಿ ರೂ. ನಿಗದಿ.
- ಕೊಪ್ಪಳ ಜಿಲ್ಲೆ ಹೀರೇಹಳ್ಳಕ್ಕೆ ಕುಡಿಯುವ ನೀರು ಮತ್ತು ಅಂತರ್ಜಲ ಅಭಿವೃದ್ಧಿ ಸಲುವಾಗಿ ತುಂಗಭದ್ರಾ ನದಿಯಿಂದ ಏತ ನೀರಾವರಿ ಯೋಜನೆ ಮೂಲಕ ನೀರು ತುಂಬಿಸುವ ಕಾಮಗಾರಿಗೆ 89.86 ಕೋಟಿ
- ಮೈಸೂರು ಜಿಲ್ಲಾ ಕಚೇರಿ ಸಂಕೀರ್ಣಗಳ ಕಟ್ಟಡ ಕಾಮಗಾರಿ ಮೊತ್ತ 84.69 ಕೋಟಿ ರೂ. ಪರಿಷ್ಕೃತ ಅಂದಾಜಿಗೆ ಒಪ್ಪಿಗೆ

### ಉಚಿತ ಅಕ್ಕಿ ಮತ್ತು ಗೋಧಿ



ಸಿದ್ದಗಂಗಾ ಮಠ ಸೇರಿ 350 ಕಲ್ಯಾಣ ಸಂಸ್ಥೆಗಳಿಗೆ ದಾಸೋಹ ಯೋಜನೆಯಲ್ಲಿ 1 ವರ್ಷ ಕಾಲ ಉಚಿತವಾಗಿ ಅಕ್ಕಿ ಮತ್ತು ಗೋಧಿಯನ್ನು ನೀಡಲು ಮಂಗಳವಾರ ಮುಖ್ಯಮಂತ್ರಿಗಳ ಸಚಿವ ಸಂಪುಟ ಒಪ್ಪಿದೆ. ಈ ತೀರ್ಮಾನದಿಂದ 32,700 ಮಕ್ಕಳಿಗೆ ಅನುಕೂಲವಾಗಲಿದೆ ಎಂದು ಮಾಧುಸ್ವಾಮಿ ತಿಳಿಸಿದರು.

### ರೈತ ನಾಯಕರು, ಸ್ವಾಮೀಜಿ, ಬಿಜೆಪಿ ನಾಯಕರ ಮೇಲಿನ ಕೇಸ್‌ಗಳು ವಾಪಸ್


ಸಾಂದರ್ಭಿಕ ಚಿತ್ರ

ವಿವಿಧ ಚಳವಳಿ ಮತ್ತು ಪ್ರತಿಭಟನೆ ಸಂದರ್ಭದಲ್ಲಿ ಹೂಡಲಾಗಿದ್ದ 51 ಕ್ರಿಮಿನಲ್ ಪ್ರಕರಣಗಳನ್ನು ವಾಪಸ್ ಪಡೆಯಲು ಸಚಿವ ಸಂಪುಟ ಒಪ್ಪಿದೆ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಮಾಹಿತಿ ನೀಡಿದರು. ಮಂಡ್ಯ ಜಿಲ್ಲೆಯಲ್ಲಿ ನಡೆದ ಚಳವಳಿ ಸಂದರ್ಭದಲ್ಲಿ ರೈತ ನಾಯಕ ಮಾದೇಗೌಡ ಸೇರಿ ಹಲವರ ಮೇಲೆ ಹಾಕಲಾಗಿದ್ದ 35 ಪ್ರಕರಣ, ಹಾಸನ ಜಿಲ್ಲೆ ಹಳೇಬೀಡು-ಮಾದಿಹಳ್ಳಿ ನೀರಾವರಿ ಯೋಜನೆಗಾಗಿ 2017ರಲ್ಲಿ ಪುಷ್ಪಗಿರಿ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಪ್ರತಿಭಟನೆ ಸಂಬಂಧ ಹಾಕಲಾಗಿದ್ದ ಪ್ರಕರಣ, ಬೆಳಗಾವಿ ಜಿಲ್ಲೆಯ ಕಳಸ ಬಂಡೂರಿ ಯೋಜನೆ ಚಳವಳಿಗಾರರು, ರೈತ ಸಂಘದ ಮೇಲಿನ ಪ್ರಕರಣ, ಕೊಪ್ಪಳ ಮತ್ತು ಕಲಬುರಗಿ ರಾಷ್ಟ್ರೀಯ ಹೆದ್ದಾರಿ ಮೇಲಿನ ಪ್ರತಿಭಟನೆ ಪ್ರಕರಣ, ಮೈಸೂರು, ಯಾದಗಿರಿ ಪ್ರಕರಣ ಸೇರಿ 51 ಪ್ರಕರಣ ವಾಪಸ್ ಪಡೆಯಲಾಗಿದೆ ಎಂದರು. ಹಾವೇರಿ ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಿದ್ದ ಪ್ರಕರಣದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ನಿರಂಜನ ಹೆರೂರು ಮತ್ತು ಶಿವರಾಜ ಸಜ್ಜನ್ ಮೇಲಿದ್ದ ಪ್ರಕರಣಗಳನ್ನು ವಾಪಸ್ ಪಡೆಯಲಾಗಿದೆ.

**ಕೇಸು ಮುಂದುವರಿಕೆ:** ಶ್ರೀ ರಾಘವೇಶ್ವರ ಭಾರತಿ ಸ್ವಾಮೀಜಿ ವಿರುದ್ಧ ನಕಲಿ ಸಿಡಿ ಮಾಡಿ ಅಪಪ್ರಚಾರ ಮಾಡಲು ಪ್ರಯತ್ನಿಸಿದ್ದ ಪ್ರಕರಣವನ್ನು ಹಿಂಪಡೆಯಲು ಹಿಂದಿನ ಸರ್ಕಾರ ತೆಗೆದುಕೊಂಡಿದ್ದ ತೀರ್ಮಾನವನ್ನು ರದ್ದು ಮಾಡಲಾಗಿದ್ದು, ಪ್ರಕರಣವನ್ನು ಮುಂದುವರಿಸಿ ಚಾರ್ಜ್‌ಶೀಟ್ ಸಲ್ಲಿಸಲು ಒಪ್ಪಿಗೆ ನೀಡಲಾಗಿದೆ ಎಂದು ಮಾಧುಸ್ವಾಮಿ ತಿಳಿಸಿದರು.